ಅಲ್ಲಿ ರೂಫ್ ಮತ್ತು ಅವನ ಸಹಾಯಕನನ್ನು ಹೊರತುಪಡಿಸಿ ಇನ್ನೂ ಐವರು ಹಿರಿಯರಿದ್ದರು. ಕಿಟ್ಟಗಟ್ಟಿದ್ದ ಒಡೆದ ಗಾಜಿನ ಲಾಂದ್ರದ ಹಳದಿ ಬಣ್ಣ ಬೆಳಕಿನ ನಡುವೆ ಮಣೆಯ ಮೇಲೆ ಕುಳಿತಿದ್ದ ಅವರ ಮುಂದೆ ಎರಡು ಶಿಲ್ಲಿಂಗ್‌ನ ತುಂಡುಗಳಿದ್ದವು. ಭದ್ರವಾಗಿ ಹಾಕಿದ ಬಾಗಿಲಿನ ಹಿಂದೆ ಚಂದಿರ ನಗುತ್ತಿದ್ದ.

'ನೀನು ಹೇಳಿದ ಪ್ರತಿ ಮಾತುಗಳು ಸರಿ ಎಂದು ನಂಬುತ್ತೇವೆ' ಎಜ್ನೋಇವ ಹೇಳಿದ. 'ನಾವು ನಮ್ಮ ವೋಟ್‌ಗಳನ್ನು ಮಾರ್ಕೋಸ್‌ಗೆ ಹಾಕುತ್ತೇವೆ. ಹಬ್ಬದ ಊಟದ ಬದಲು ಮಾಮೂಲಿ ಊಟ ಯಾರಿಗೆ ಬೇಕು. ನಮ್ಮ ಮತವಷ್ಟೆ ಅಲ್ಲ ನಮ್ಮ ಹೆಂಡತಿಯರ ಮತವೂ ಮಾರ್ಕೋಸ್‌ಗೆ ಎಂದು ತಿಳಿಸು. ಆದರೆ ಕೇವಲ ಎರಡು ಶಿಲ್ಲಿಂಗ್. ನಮಗೆ ಅವಮಾನ ಮಾಡಿದಂತೆ.' ಮತ್ತೊಮ್ಮೆ ಲಾಂದ್ರವನ್ನು ನಾಣ್ಯಗಳ ಹತ್ತಿರ ತಂದು ತಾನು ಸುಳ್ಳು ಹೇಳುತ್ತಿಲ್ಲವೆಂದು ಖಚಿತಪಡಿಸಿ, 'ಹೌದು ಎರಡು ಶಿಲ್ಲಿಂಗ್ ತೀರಾ ಅವಮಾನ. ಮಾರ್ಕೋಸ್ ಬಡವನಾಗಿದ್ದರೆ ನಮ್ಮ ಹಿರಿಯರಂತೆ ನಾನು ಯಾವುದೇ ಹಣವಿಲ್ಲದೆ ಮತ ಹಾಕುವುದರಲ್ಲಿ ಮೊದಲನೆಯವನಾಗಿರುತ್ತಿದ್ದೆ. ಆದರೆ ಈ ಹೊತ್ತು ಮಾರ್ಕೋಸ್ ದೊಡ್ಡ ಮನುಷ್ಯ. ನಾವು ನಿನ್ನೆಯೂ ಕೇಳಿಲ್ಲ. ನಾಳೆಯೂ ಕೇಳುವುದಿಲ್ಲ. ಆದರೆ ಈ ದಿನ ನಮ್ಮದು. ಗಟ್ಟಿ ಮರ ಹತ್ತಿ ಬೇಕಾದ ಸೌದೆಯನ್ನು ಕಡಿದುಕೊಂಡು ಬರದಿರುವ ಮೂರ್ಖತನ ಮಾಡಲಾರೆವು.'

ರೂಫ್ ಆ ಮಾತು ಒಪ್ಪಿದ. ಏಕೆಂದರೆ ಅವನೂ ಆ ರೀತಿಯಲ್ಲಿ ಸೌದೆಯನ್ನು ಕಡಿದುಕೊಂಡವನೆ. ಕಳೆದ ವಾರ ಮಾರ್ಕೋಸನ ಬೆಲೆಬಾಳುವ ಉಡುಪನ್ನು ಕೇಳಿ ಪಡೆದುಕೊಂಡಿದ್ದ ಅಷ್ಟೆ ಏಕೆ? ಮಾರ್ಕೋಸ್‌ನ ಮನೆಯ ಫ್ರಿಡ್ಜ್‌ನಿಂದ ಐದನೇ ಬೀರ್ ಬಾಟಲ್ ತೆಗೆಯುವಾಗ ಅವನ ಹೆಂಡತಿ (ಈ ಹಿಂದೆ ಮಾರ್ಕೋಸ್‌ನನ್ನು ತೊಂದರೆಯಲ್ಲಿ ಸಿಲುಕಿಸಿದ್ದ ಶಿಕ್ಷಕಿ) ತಡೆದಾಗ

